ಇಂಥ ಅನೇಕ ಸೊಗಸಿನ ಇನಿಂಗ್ಸ್‌ಗಳು ಕರುಣ್ ಅವರ ಬ್ಯಾಟ್‌ನಿಂದ ಹೊರಹೊಮ್ಮಿವೆ. ತಾಳ್ಮೆಯ ಆಟ, ಸ್ಥಿರತೆ, ಫಿಟ್‌ನೆಸ್, ನಿರಂತರ ಅಭ್ಯಾಸ, ಪ್ರವಾಸಕ್ಕೆ ಅನುಗುಣವಾಗಿ ಆಯಾ ದೇಶಗಳಿಗೆ ಹೊಂದಿಕೊಂಡು ಆಡುವ ಕೌಶಲ ಎಲ್ಲವೂ ಕರುಣ್ ಬಳಿಯಿವೆ. ದೇಶಿ ಟೂರ್ನಿಯಲ್ಲಿ ತೋರಿಸಿದ ಪ್ರದರ್ಶನ ಅವರಿಗೆ 2016ರಲ್ಲಿ ದೇಶದ ತಂಡವನ್ನು ಪ್ರತಿನಿಧಿಸುವ ಅವಕಾಶ ತಂದುಕೊಟ್ಟಿತು. ಜಿಂಬಾಬ್ವೆ ವಿರುದ್ಧದ ಏಕದಿನ ಮತ್ತು ಅಂತರರಾಷ್ಟ್ರೀಯ ಟಿ–20 ಸರಣಿಗೆ ಆಯ್ಕೆಯಾದರು. ಅದೇ ವರ್ಷ ಇಂಗ್ಲೆಂಡ್ ತಂಡ ಟೆಸ್ಟ್ ಸರಣಿಯಾಡಲು ಭಾರತಕ್ಕೆ ಭೇಟಿ ನೀಡಿದ್ದ ವೇಳೆ ಆ ಸರಣಿಯಲ್ಲಿಯೂ ಕರುಣ್ ಅವಕಾಶ ಪಡೆದರು.

ಮೊಹಾಲಿಯಲ್ಲಿ ಇಂಗ್ಲೆಂಡ್ ವಿರುದ್ಧ ಆಡಿ ಟೆಸ್ಟ್‌ಗೆ ಪದಾರ್ಪಣೆ ಮಾಡಿದ ಕರುಣ್ ನಾಯರ್ ಚೆನ್ನೈನಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ಜಗತ್ತಿಗೆ ಕ್ರಿಕೆಟ್ ಪಾಠ ಹೇಳಿಕೊಟ್ಟ ಇಂಗ್ಲೆಂಡ್ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದ್ದರು. ತಾವಾಡಿದ ಮೂರನೇ ಟೆಸ್ಟ್‌ನಲ್ಲಿಯೇ ಔಟಾಗದೆ 303 ರನ್ ಗಳಿಸಿದ ಬಳಿಕ ಕರುಣ್ ಜನಪ್ರಿಯತೆ ಏರುತ್ತಲೇ ಸಾಗಿತ್ತು. ದೇಶಿ ಟೂರ್ನಿಗಳಲ್ಲಿ ತೋರಿದ್ದ ಸಾಧನೆಗೆ ಟೆಸ್ಟ್‌ನಲ್ಲಿ ಬಂದ ತ್ರಿಶತಕ ಸಾಧನೆ ಹೊಳಪು ನೀಡಿತು. ಟೆಸ್ಟ್ ಕ್ರಿಕೆಟ್‌ನಲ್ಲಿ ವೀರೇಂದ್ರ ಸೆಹ್ವಾಗ್ ನಂತರ ತ್ರಿಶತಕ ಬಾರಿಸಿದ ಎರಡನೇ ಭಾರತೀಯ ಎನ್ನುವ ಗೌರವಕ್ಕೂ ಭಾಜನರಾದರು.

ಒಂದೆಡೆ ದೇಶಿ ಕ್ರಿಕೆಟ್‌ನಲ್ಲಿ ಸ್ಥಿರ ಪ್ರದರ್ಶನ, ರಾಷ್ಟ್ರೀಯ ತಂಡದಲ್ಲಿ ಮೇಲಿಂದ ಮೇಲೆ ಅವಕಾಶಗಳು ಸಿಗುತ್ತಿದ್ದಾಗಲೇ ಕರುಣ್ ನಾಯರ್ ಪ್ರದರ್ಶನ ಮಟ್ಟ ಕುಸಿಯುತ್ತಲೇ ಸಾಗಿತು. 2017ರಲ್ಲಿ ಆಸ್ಟ್ರೇಲಿಯಾ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಬೆಂಗಳೂರು, ರಾಂಚಿ ಹಾಗೂ ಧರ್ಮಶಾಲಾದಲ್ಲಿ ಪಂದ್ಯಗಳನ್ನಾಡಿದರೂ ಅವರ ಬ್ಯಾಟಿಂಗ್ ಸುಧಾರಿಸಲಿಲ್ಲ. ತಂಡದಲ್ಲಿ ಸ್ಥಾನ ಗಳಿಸಲು ಕಾಯುತ್ತಿದ್ದ ಬೇರೆ ಪ್ರತಿಭೆಗಳಿಗೆ ಇದು ಅವಕಾಶಕ್ಕೂ ದಾರಿಯಾಯಿತು. 2018ರಲ್ಲಿ ಇಂಗ್ಲೆಂಡ್ ಎದುರಿನ ಸರಣಿಗೆ ಆಯ್ಕೆಯಾದರೂ ಪ್ರವಾಸ 'ಬೆಂಚ್' ಕಾಯಲು ಸೀಮಿತವಾಯಿತು.

ಸದ್ಯದ ಸ್ಥಿತಿಯಲ್ಲಿ ಭಾರತ ಕ್ರಿಕೆಟ್ ಜಗತ್ತು ನಿತ್ಯವೂ ಪ್ರತಿಭಾವಂತರನ್ನು ಸೃಷ್ಟಿಸುತ್ತಿರುವ ಕಾರ್ಖಾನೆಯಂತಾಗಿದೆ. ರಣಜಿ, ವಿಜಯ ಹಜಾರೆ, ದೇವಧರ್ ಟ್ರೋಫಿ, ಸೈಯದ್ ಮುಸ್ತಾಕ್ ಅಲಿ ಟ್ರೋಫಿ, ಐಪಿಎಲ್, ವಿದೇಶಗಳಲ್ಲಿ ನಡೆಯುವ ಕೌಂಟಿ ಕ್ರಿಕೆಟ್ ಪಂದ್ಯಗಳು ಹೀಗೆ ಅನೇಕ ಟೂರ್ನಿಗಳಲ್ಲಿ ಆಡಿ ಭಾರತೀಯ ಆಟಗಾರರು ರಾಷ್ಟ್ರೀಯ ತಂಡದ ಕದ ತಟ್ಟಲು ಕಾಯುತ್ತಿದ್ದಾರೆ. ಎಲ್ಲ ಪ್ರತಿಭೆ ಇದ್ದೂ 15 ಸದಸ್ಯರನ್ನು ಒಳಗಂಡ ಭಾರತ ತಂಡದ ಡ್ರೆಸ್ಸಿಂಗ್ ಕೊಠಡಿಯಲ್ಲಿ ಅವಕಾಶ ಸಿಕ್ಕರೂ ಸಾಕು ಎನ್ನುವ ತುಡಿತದಲ್ಲಿದ್ದಾರೆ. ಒಂದೆಡೆ ದೇಶಿ ಟೂರ್ನಿಗಳ ಬಲ, ಇನ್ನೊಂದೆಡೆ ಐಪಿಎಲ್‌ನಲ್ಲಿ ಪ್ರತಿವರ್ಷವೂ ಹೊಸ ತಾರಾ ಆಟಗಾರರ ಉದಯ ಭಾರತದ ಕ್ರಿಕೆಟ್‌ನಲ್ಲಿ ಸ್ಪರ್ಧಾತ್ಮಕತೆ ಹೆಚ್ಚಲು ಕಾರಣವಾಗಿದೆ. ಹಿಂದಿನ ಏಳೆಂಟು ವರ್ಷಗಳ ಅವಧಿಯಲ್ಲಿ ಟೆಸ್ಟ್ ಹಾಗೂ ಏಕದಿನ ತಂಡದಿಂದ ದೀರ್ಘಕಾಲ ಹೊರಬಿದ್ದ ಆಟಗಾರ ಮರಳಿ ಸ್ಥಾನ ಗಳಿಸಿದ್ದು ತೀರಾ ಕಡಿಮೆ. ರಾಷ್ಟ್ರೀಯ ತಂಡದಿಂದ ಹೊರಗುಳಿದ ಬಳಿಕ ಬಹಳಷ್ಟು ಅಭಿಮಾನಿಗಳ ಸ್ಮೃತಿ ಪಟಲದಿಂದಲೂ ಆಟಗಾರ 'ಔಟ್' ಆಗುತ್ತಿರುವಷ್ಟು ಭಾರತದಲ್ಲಿ




